ದಿನಾಂಕಃ **15-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟಿ ಸವಾಲು:ಆರೋಪಿ ಪರ ವಕೀಲರಾದ ಶ್ರೀ ಎಮ್.ಎ.ಎಚ್ ಅವರಿಂದ:</u>

1) ನಾನು ಗೋಕಾಕಿನ ಮಾಲದಾರ ಗಲ್ಲಿಯಲ್ಲಿ ವಾಸವಾಗಿರುತ್ತೇನೆ. ನಾನು ಬಿ.ಎ. ಪದವೀಧರನಾಗಿರುತ್ತೇನೆ. ಪಿರ್ಯಾದಿದಾರರು ನನ್ನ ಸಂಬಂಧಿಕನಾಗಬೇಕು ಎಂದರೆ ಸರಿ. ಆರೋಪಿ ನನಗೆ ಅನೇಕ ವರ್ಷಗಳಿಂದ ಪರಿಚಯಸ್ಥನಾಗಿರುತ್ತಾನೆ. ಆರೋಪಿ ಆಟೋವನ್ನು ನಡೆಸುತ್ತಿದ್ದುದರಿಂದ ನನಗೆ ಪರಿಚಯಸ್ಥನಾಗಿರುತ್ತಾನೆ. ಸಾಕ್ಷಿಯು ಸ್ವತಃ ಮುಂದುವರೆದು ಆರೋಪಿ ಪಡಿತರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದುರಿಂದಲೂ ಸಹ ನನಗೆ ಗೊತ್ತಿರುತ್ತಾನೆ.

2) ಪಿರ್ಯಾದುದಾರರ ಪ್ರತಿಯೊಂದು ವ್ಯವಹಾರದ ಬಗ್ಗೆಯೂ ಸಹ ನನಗೆ ಗೊತ್ತಿರುತ್ತದೆ. ಪಿರ್ಯಾದುದಾರರು ಆರೋಪಿಗೆ ಮಾತ್ರ ಹಣ ನೀಡಿರುವುದು ನನಗೆ ಗೊತ್ತಿರುತ್ತದೆ. ಬೇರೆ ಯಾವ ವ್ಯಕ್ತಿಗಳಿಗೂ ಪಿರ್ಯಾದುದಾರರು ಹಣ ಕೊಟ್ಟಿರುವುದಿಲ್ಲ. ಪಿರ್ಯಾದುದಾರರು ಆರೋಪಿಗೆ ಯಾವ ಯಾವ ದಿನಾಂಕದಂದು ಎಷ್ಟೆಷ್ಟು ಹಣ ಕೊಟ್ಟಿರುತ್ತಾನೆ ಎಂಬುವುದು ನನಗೆ ಗೊತ್ತಿರುವುದಿಲ್ಲ. ನಿಪಿ-6 ರ ದಾಖಲೆಗೆ ಆರೋಪಿ , ಪಿರ್ಯಾದುದಾರರು ಹಾಗೂ ನಮ್ಮ ಸಮಾಜದ ಹಿರಿಯರು ಸಹಿ ಮಾಡಲು ನನಗೆ ತಿಳಿಸಿದ್ದಕ್ಕಾಗಿ ನಾನು ನಿಪಿ-6 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-6 ಕ್ಕೆ ನಾನು ಗೋಕಾಕ ನ್ಯಾಯಾಲಯದ ಬೆರಳಚ್ಚು ಮಾಡುವವರ ಅಂಗಡಿಯಲ್ಲಿ ಸಹಿ ಮಾಡಿರುತ್ತೇನೆ. ನಾನು ನಿಪಿ-6 ಕ್ಕೆ ನನ್ನ ಹೆಸರು ಬರೆದ ಸ್ಥಳದ ಮೇಲೆ ನಿಪಿ-6(ಎ) ರಂತೆ ಸಹಿ ಮಾಡಿರುತ್ತೇನೆ. ನಿಪಿ-6 ನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದು ಅವರ ಹೆಸರು ಸಹಿ ಮಾಡುವ ಸ್ಥಳದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿ ಮತ್ತು ಪಿರ್ಯಾದುದಾರರಿಗೆ ನಮ್ಮ ಜಮಾತ ಹಿರಿಯರು ಬಾಂಡ ಮಾಡಿಕೊಳ್ಳಿರಿ ಎಂದು ತಿಳಿಸಿದ್ದಕ್ಕಾಗಿ ಆರೋಪಿ ಮತ್ತು ಪಿರ್ಯಾದುದಾರರು ಬಾಂಡನ್ನು ತಯಾರಿಸಿ ನನಗೆ ಕರೆ ಮಾಡಿದ್ದಕ್ಕಾಗಿ ನಾನು ಹೋಗಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಂತಹ ಜಮಾತ ಸದಸ್ಯರ ಕುರಿತು ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ ಎಂದರೆ ಸರಿ.

3) ಪಿರ್ಯಾದುದಾರರು ನನ್ನ ಸಂಬಂಧಿಕನಾಗಿರುವುದರಿಂದ ಪಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.